# ಸಿ. ಎಸ್. ಮುಕ್ತಾರವರ ಕಾದಂಬರಿಗಳಲ್ಲಿ ವಿಧವಾವಿವಾಹ: ಒಂದು ವಿಹಂಗಮ ನೋಟ

**ಪಲ್ಲವಿ ಎಸ್.**
ಸಂಶೋಧನಾ ವಿದ್ಯಾರ್ಥಿನಿ
ಮಹಾರಾಜ ಕಾಲೇಜು
ಮೈಸೂರು.

**Article Link: https://aksharasurya.com/2024/01/pallavi-s-2/**

## ABSTRACT:

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ನಮ್ಮ ಸಮಾಜ ಎದುರಿಸುತ್ತಿದ್ದ ಬಹುದೊಡ್ಡ ಸಾಮಜಿಕ ಸಮಸ್ಯೆಗಳಲ್ಲಿ ವಿಧವಾ ಸಮಸ್ಯೆಯೂ ಒಂದು. ಬಾಲ್ಯವಿವಾಹದಿಂದಾಗಿ ಬಹುಬೇಗನೆ ವಿವಾಹಕ್ಕೆ ಒಳಗಾಗುತಿದ್ದ ಹೆಣ್ಣುಮಕ್ಕಳು ಕಾರಣಾಂತರಗಳಿಂದ ಪತಿ ಮರಣ ಹೊಂದಿದಾಗ ವೈಧವ್ಯದ ಪಟ್ಟ ಹೊರುತ್ತಿದ್ದರು. ಬಾಲ್ಯದಲ್ಲಿಯೇ ವೈಧವ್ಯದ ಪಟ್ಟ ಮುಟ್ಟುತ್ತಿದ್ದ ಪುಟ್ಟ ವಿಧವೆಯರ ಗೋಳಂತೂ ಹೇಳತೀರದು. ವಿಧವೆಯರು ಅನುಸರಿಸಬೇಕಾದ ಜೀವನ–ಲಕ್ಷಣಗಳ ಕುರಿತಾಗಿ ಸಮಾಜ ಅಲಿಖಿತ ಶಾಸನವನ್ನೇ ಬರೆದಿತ್ತು. ವಿಧವೆಯರು ತನ್ನ ವಯೋಸಹಜವಾದ ಆಸೆ–ಆಕಾಂಕ್ಷೆಗಳನ್ನು ಅದುಮಿಟ್ಟು ನರಕ ಸದೃಶ ಬಾಳು ಬಾಳಬೇಕಿತ್ತು. ಬಳೆ ತೊಡದೆ, ಹೂಮುಡಿಯದೆ, ತಿಲಕವಿಡದೆ, ಬಿಳಿ ಅಥವಾ ಕೆಂಪು ಬಣ್ಣದ ಸೀರೆಯುಟ್ಟು ಕೇಶಮುಂಡನ ಮಾಡಿಸಿ ಅಪಶಕುನದ ಸಂಕೇತವೆಂಬಂತೆ ಬಿಂಬಿತವಾಗಿ ಮನೆಯವರಿಗೆ ಹೊರೆಯಾಗಿ ಬಾಳಬೇಕಿದ್ದ ವಿಧವೆಯರ ಸ್ಥಿತಿ ಹೀನಾಯವಾಗಿತ್ತು.

## KEY WORDS:

ಜೀವನ ಮೌಲ್ಯ, ಪಿತೃ ಪ್ರಧಾನ ಸಮಾಜ, ಸುಮಂಗಲಿತನ, ಶೋಚನೀಯ ಸ್ಥಿತಿ, ಸಮಾನತೆ, ಸ್ವಾವಲಂಭಿ ಬದುಕು, ಸಂಪ್ರದಾಯ, ಪುನರ್ವಿವಾಹ, ಸ್ಥಿತ್ಯಂತರ, ಅಸ್ಥಿತ್ವ.

ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಸಾಮಾನ್ಯ ಸ್ತ್ರೀಯರೇ ಒಂದು ಉತ್ತಮ ಬದುಕನ್ನು ಕಟ್ಟಿಕೊಳ್ಳುವುದು ಸವಾಲಿನ ವಿಷಯವಾಗಿರುವಾಗ, ವಿಧವಾ ಸ್ತ್ರೀಯರ ವಿಷಯದಲ್ಲಿ ಇದು ಸಾಹಸವೇ ಆಗಿದೆ. ಅಲಂಕಾರ ಪ್ರಿಯರಾದ ಸ್ತ್ರೀಯರು ತಮ್ಮ ವೈಧವ್ಯದ ಕಾರಣದಿಂದಾಗಿ ವಿಲಕ್ಷಿತ ಜೀವನ ನಡೆಸುತ್ತಿದ್ದುದು, ಸಮಾಜದ ಕರಾಳ ಮುಖವನ್ನು ಪ್ರದರ್ಶಿಸುತ್ತದೆ. ವೇದಗಳ ಕಾಲದಲ್ಲಿ ವಿಧವೆಯರ ಪುನರ್ವಿವಾಹಕ್ಕೆ

ಸ್ಥಾನವಿತ್ತಾದರೂ, ಅನಂತರದಲ್ಲಿ ಉಂಟಾದ ಶ್ರೇಣೀಕೃತ ಸಾಮಾಜಿಕ ಪದ್ಧತಿಯಿಂದ ಇದು ಮರೆಯಾಗಿ ವಿಧವೆಯರ ಬದುಕನ್ನು ಶೋಚನೀಯ ಸ್ಥಿತಿಗೆ ತಳ್ಳುವ ಎಲ್ಲಾ ಹುನ್ನಾರಗಳು ಪುರುಷ ಸಮಾಜದಲ್ಲಿ ಜರುಗಿದವು. ತಮ್ಮ ಬಾಲ್ಯದಲ್ಲಿ ಹೆಚ್ಚಿಗೆ ವಿದ್ಯಾಭ್ಯಾಸ ಹೊಂದದೆ ಮದುವೆ ಬಂಧನಕ್ಕೆ ಒಳಗಾಗುತ್ತಿದ್ದ ಸ್ತ್ರೀಯರು ವೈಧವ್ಯದ ನಂತರ ಉತ್ತಮ ಜೀವನ ಸಾಗಿಸಲು ಸಾಧ್ಯವಾಗದೆ ಬೇರೆಯವರ ಆಶ್ರಯದಲ್ಲಿಯೇ ಬದುಕಿನ ದಾರಿಯನ್ನು ಅನಿವಾರ್ಯವಾಗಿ ಸವೆಸುತ್ತಿದ್ದರು. ಆದರೆ ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ರಾಜಾರಾಮ ಮೋಹನರಾಯರು, ಜ್ಯೋತಿಭಾಪುಲೆ ಮುಂತಾದ ಸಮಾಜ ಸುಧಾರಣಾವಾದಿಗಳ ಅವಿರತ ಹೋರಾಟಗಳಿಂದ ಬಾಲ್ಯವಿವಾಹಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡುಬಂದು, ವಿಧವೆಯರ ಸಂಖ್ಯೆ ಕಡಿಮೆಯಾಯಿತು. ಜೊತೆಗೆ ವಿಧವಾ ವಿವಾಹಕ್ಕೆ ಪ್ರೋತ್ಸಾಹ ದೊರಕಿತು. ಆದ ರೆ ಇಷ್ಟೆಲ್ಲಾ ಬದಲಾವಣೆಗಳ ನಡುವೆಯೂ, ಸ್ವಾತಂತ್ರ್ಯನಂತರದಲ್ಲಿ ವಿಧವಾ ವಿವಾಹ ಅಲ್ಲಲ್ಲಿ ಕೇವಲ ಬೆರಳೆಣಿಕೆಯಷ್ಟು ಕಂಡುಬಂದಿದ್ದು, ಇದು ಸಮಾಜದ ಮೌಢ್ಯದ ವಿಸ್ತೃತ ಜಾಲವನ್ನು ಪರಿಚಯಿಸುತ್ತದೆ. ವಿಧವಾ ವಿವಾಹಗಳ ಆಚ ರಣೆಯು ಅಧಿಕೃತವಾಗಿ ಸಮಾಜದಲ್ಲಿ ಜಾರಿಗೊಳ್ಳಬೇಕೆಂದರೆ ಮೊದಲು ಪುರುಷ ಸಮಾಜ ಅವಕಾಶ ನೀಡಬೇಕು. ಅಷ್ಟೇ ಮುಖ್ಯವಾಗಿ ಸ್ತ್ರೀಯರು ಸಂಪೂರ್ಣವಾಗಿ ಮನಸ್ಸು ಮಾಡಬೇಕು. ಇಂತಹ ವಿಧವಾ ಸ್ತ್ರೀ ಪಾತ್ರಗಳನ್ನು ವಿಭಿನ್ನ ದೃಷ್ಠಿಯಲ್ಲಿ ನೋಡುವ ಲೇಖಕಿ ತಮ್ಮ ಕಾದಂಬರಿಗಳಲ್ಲಿನ ಪಾತ್ರಗಳನ್ನು ಭಿನ್ನತೆಯೆಡೆಗೆ ಕೊಂಡೊಯ್ದಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯು ತನ್ನ ಅಸ್ಥಿತ್ವಕ್ಕಾಗಿ ಹೋರಾಟ ನಡೆಸುವ ದೃಶ್ಯ ಒಂದು ಕಡೆಯಾದರೆ, ತನ್ನ ಕುಟುಂಬಕ್ಕಾಗಿ ಬದುಕನ್ನೇ ಮೀಸಲಿಟ್ಟ ವಿಧವಾ ಸ್ತ್ರೀ ಪಾತ್ರಗಳು ಮತ್ತೊಂದು ಕಡೆಯಲ್ಲಿ ಗೋಚರಿಸುತ್ತವೆ. ಪರಂಪರೆಯ ಸಂಪ್ರದಾಯವನ್ನು ಮೀರಿ ಪುನರ್ವಿವಾಹವಾಗಿ ವಿಧವಾ ಬದುಕನ್ನು ಮತ್ತೆ ಹಸನು ಮಾಡಿಕೊಳ್ಳುವ ಸ್ತ್ರೀ ಪಾತ್ರ ಆದರ್ಶನೀಯವಾಗಿ ಕಂಡುಬರುತ್ತದೆ. ಸ್ತ್ರೀಯರು ತಮ್ಮಲ್ಲಿರುವ ಹಿಂಜರಿಕೆಯ ಸ್ವಭಾವದಿಂದ ಹೊರಬಂದು ಮೌಢ್ಯವನ್ನು ಮೆಟ್ಟಿ ನಿಂತಾಗ ಮಾತ್ರ ವಿಧವಾ ವಿವಾಹಗಳು ಯಶಸ್ವಿಯಾಗುತ್ತವೆ. ಸ್ತ್ರೀಯರ ಮನೋಭಾವದಲ್ಲಿ ಬದಲಾವಣೆ ತರುವ ಏಕೈಕ ಅಸ್ತ್ರ ಶಿಕ್ಷಣವಾಗಿದ್ದು, ಇದ ರಿಂದ ಜ್ಞಾನ ಪಡೆಯುವ ಮಹಿಳೆಯರು ಉದ್ಯೋಗ ಹೊಂದಿ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಾರೆ. ಸಂಪ್ರದಾಯ ಮನೆತನದವರಾದ ಮುಕ್ತಾರವರು ತಮ್ಮ ಕಾಲಘಟ್ಟದ ಸಮಾಜದಲ್ಲಿ ಜರುಗುತ್ತಿದ್ದ ವಿಧವಾ ವಿವಾಹಗಳ ಬಗೆಗಿನ ಪರ ಮತ್ತು ಪ್ರತಿ ರೋಧದ ನೆಲೆಗಳನ್ನು ತಮ್ಮ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಪ್ರದಾಯವಾದಿಗಳು ವಿಧವೆಯರ ಬಗೆಗೆ ತಳೆದಿದ್ದ

ಮನೋಭಾವ, ವಿಧವಾ ವಿವಾಹಕ್ಕೆ ನೀಡಿದ ಪ್ರತಿಕ್ರಿಯೆ ಮತ್ತು ಆಧುನೀಕತೆಯೆಡೆಗೆ ಮನಸು ಮಾಡಿದ ಜನತೆ ವಿಧವಾ ವಿವಾಹಕ್ಕೆ ನೀಡಿದ ಪ್ರೋತ್ಸಾಹದ ಪರಿಯನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಿ, ಸಮಾಜದ ಬದಲಾದ ಕಾಲಘಟ್ಟದ ಸ್ಥಿತ್ಯಂತರಗಳೊಂದಿಗೆ ವಿಶ್ಲೇಷಿಸಲಾಗಿದೆ.

'ಕಳೆದುಹೋದವರು' ಕಾದಂಬರಿಯಲ್ಲಿನ ನಾಯಕಿ ಸುಜಯಾ ಅಂತರ್ಜಾತಿ ವಿವಾಹ ಮತ್ತು ವಿಧವಾವಿವಾಹವಾಗುವ ಆಧುನಿಕ ವಿದ್ಯಮಾನದ ಪಾತ್ರವಾಗಿ ಮೂಡಿಬಂದಿದೆ. ಅಂತರ್ಜಾತಿ ವಿವಾಹವಾದ ಸುಜಯಾ ಗಂಡನ ಜೊತೆ ಹಲವಾರು ಕಷ್ಟಗಳ ನಡುವೆ ಜೀವನ ಸಾಗಿಸಲು ಪ್ರಯತ್ನಿಸಿದರೂ ಆತನ ಬೇಜವಾಬ್ದಾರಿ ನಡೆಯಿಂದ ಬೇಸತ್ತು ದೂರವಾಗುತ್ತಾಳೆ. ಕಾಲೇಜಿನ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸುಜಯಾ ಗಂಡ ಮರಣಿಸಿದ ವಿಷಯ ತಿಳಿದು ತನ್ನ ಮತ್ತು ಮಗುವಿನ ಭವಿಷ್ಯದ ದೃಷ್ಠಿಯಿಂದ ವಿಧವಾ ವಿವಾಹಕ್ಕೆ ಸಮ್ಮತಿ ಸೂಚಿಸುತ್ತಾಳೆ. "ಬಿಳಿ ನೂಲಿನ ಸೀರೆ, ಬಿಳಿಯ ಜೋಲಿ, ಬಿಚ್ಚಿದ ಕೇಶರಾಶಿ, ಬರಿಯ ಹಣೆ, ನಾಲ್ಕು ವರುಷಗಳಿಂದ ಅದೇ ಅಲಂಕಾರ ಅವಳದು."[1] ವಿಧವೆಯಾದ ಸುಜಯಾ ಹಳೆಯದನ್ನು ಮರೆತು ಮೊದಲನೇ ಗಂಡನ ಮನೆಯೊಂದಿಗಿನ ಎಲ್ಲಾ ಸಂಬಂಧಗಳನ್ನು ಕಳೆದುಕೊಂಡು ಗಟ್ಟಿ ಮನಸ್ಸಿನಿಂದ ಎರಡನೇ ಮದುವೆಗೆ ಸಮ್ಮತಿ ಸೂಚಿಸುವುದು ಅವಳ ನಿರ್ಧಾರದಲ್ಲಿನ ದೃಢತೆಯನ್ನು ಬಿಂಬಿಸುತ್ತದೆ. ಅತ್ಯಂತ ಕಟ್ಟುನಿಟ್ಟಿನ ಧಾರ್ಮಿಕ ಕಟ್ಟಳೆಗಳನ್ನು ಸಂಪ್ರದಾಯ ಬದ್ಧವಾಗಿ ಇಂದಿಗೂ ರೂಢಿಸಿಕೊಂಡು ಬಂದಿರುವ ಹಿಂದೂ ಧರ್ಮದಲ್ಲಿ ವಿಧವಾ ವಿವಾಹಕ್ಕೆ ಮೊದಲಿನಿಂದಲೂ ಪ್ರಾಶಸ್ತ್ಯವಿದೆ. ಆದರೆ ಜನರ ಆಲೋಚನೆಗಳಲ್ಲಿನ ಭಿನ್ನತೆಯಿಂದಾಗಿ ಇದು ಹೆಚ್ಚಾಗಿ ಯಶಸ್ವಿಗೊಂಡಿಲ್ಲ. ಸುಜಯಾ ವಿಧವೆಯಾದ ಮೇಲೂ ಮತ್ತೆ ಮದುವೆಯಾಗುವ ಉತ್ಸಾಹವನ್ನು ತೋರುವುದು ಅವಳಿಗೆ ದೊರೆತ ಉನ್ನತ ಶಿಕ್ಷಣದಿಂದ ಎಂದರೆ ತಪ್ಪಾಗಲಾರದು. ಸಮಾಜದ ಅನಿಷ್ಟಗಳನ್ನು ತೊಡೆದು ಹಾಕುವಲ್ಲಿ ಮತ್ತು ಸಮಾಜದ ಸಕಾರಾತ್ಮಕ ಬೆಳವಣಿಗೆಯಲ್ಲಿ ಆಧುನಿಕ ಶಿಕ್ಷಣ ಒಂದು ವರವಾಗಿ ಪರಿಣಮಿಸಿದೆ. ಶಿಕ್ಷಣ ಪಡೆದು ಮನಸ್ಸುಗಳು ಮುಕ್ತ ಮನಸ್ಸಿನಿಂದ ಇದನ್ನು ಒಪ್ಪಿಕೊಂಡಿರುವುದು ಬದಲಾದ ಕಾಲದ ನಡೆಯನ್ನು ಸೂಚಿಸುತ್ತದೆ. ಸುಜಯಾ ವಿಧವೆಯೆಂದು, ಆಕೆಗೆ ಒಂದು ಮಗುವಿದೆ ಎಂಬ ಸತ್ಯ ತಿಳಿದಿದ್ದರೂ ಆಕೆಯ ಮೇಲಿನ ಪ್ರೀತಿಗೋಸ್ಕರವೇ ಅವಳನ್ನು ಮದುವೆಯಾಗ ಬಯಸುವ ಕೇಶವನ ಹೃದಯ ವೈಶಾಲ್ಯತೆ ಮೆಚ್ಚುವಂಥದ್ದು. ನೆಮ್ಮದಿಯ ಜೀವನಕ್ಕಾಗಿ ಎರಡನೇ ಮದುವೆಯಾಗುವ ಸುಜಯಾ ನಿರ್ಧಾರ ಕಾದಂಬರಿಯಲ್ಲಿ ಯಶಸ್ವಿಯಾಗಿದೆ. ವಿಧವೆಯರಲ್ಲಿಯೂ ತನ್ನ ಬದುಕಿನ ಕು–

ರಿತು ಇಂತಹ ಹಠ, ಛಲ ಇದ್ದಾಗ ಅವರ ಮುಂದಿನ ಜೀವನ ಸುಗಮವಾಗಿ ಸಾಗಬಲ್ಲದು ಎಂಬುದನ್ನು ಲೇಖಕಿ ಸುಜಯಾ ಪಾತ್ರದ ಮೂಲಕ ಕಟ್ಟಿಕೊಟ್ಟಿದ್ದಾರೆ. ಮುಕ್ತಾರವರ ಸ್ತ್ರೀಪರ ಕಾಳಜಿ ನಾಗರೀಕ ಸಮಾಜದ ಪ್ರಜ್ಞೆಯನ್ನು ಎಚ್ಚರಿಸುವುದೇ ಆಗಿದೆ. ಸಮಾಜದ ಸುಧಾರಣೆಯಲ್ಲಿ ವಿಧವಾ ವಿವಾಹಗಳು ಮಹತ್ವ ಪಡೆದಿದ್ದು, ಮಹಿಳೆಯರು ವಿಧವೆಯರಾಗಿ ಅನುಭವಿಸುವ ಮಾನಸಿಕ ಹಿಂಸೆಯನ್ನು ಇದು ಕಡಿಮೆಗೊಳಿಸುತ್ತದೆ. ವಿಧವೆಯೆಂಬ ಕೀಳರಿಮೆಯಿಂದ ಹೊರಬರುವ ಸು–ಜಯಾ ಸಮಾಜದಲ್ಲಿ ವಿಧವೆಯರು ತಮ್ಮ ಭವಿಷ್ಯವನ್ನು ನಿರ್ಧರಿಸುವಾಗ ತೆಗೆದುಕೊಳ್ಳಬೇಕಾದ ಜಾಗರೂಕತೆಯ ಅಂಶಗಳ ತಿಳುವಳಿಕೆಯ ಪಾತ್ರವಾಗಿ ಮೂಡಿಬಂದಿದೆ.

ಈ ಕಾದಂಬರಿಯಲ್ಲಿ ಕಂಡುಬರುವ ಸುಜಯಾಳ ತಂದೆಯಾದ ಶಾಸ್ತ್ರಿಗಳ ಪಾತ್ರವು ಆಧುನೀಕತೆಯ ಸ್ಪರ್ಶದೊಂದಿಗೆ ಮೈದಳೆದಿದೆ. ಮಗಳು ಅಂತರ್ಜಾತಿ ವಿವಾಹವಾಗಿ ಸೋತು ಮನೆಗೆ ಬಂದಾಗ ಅವಳ ಕೈ ಹಿಡಿದು, ಸಾಂತ್ವನ ಹೇಳುವ ಶಾಸ್ತ್ರಿಗಳ ಗುಣ ಪ್ರಶಂಸನೀಯವಾದುದು. ಸಂಪ್ರದಾಯ ಮನೆತನದವರಾದರೂ ತನ್ನ ಮಗಳ ಉತ್ತಮ ಭವಿಷ್ಯಕ್ಕಾಗಿ ಜಾತಿ ಮತ್ತು ಸಂಪ್ರದಾಯವನ್ನು ಮೀರಿ ಮಗಳ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವ ಶಾಸ್ತ್ರಿಗಳ ನಿಲುವು ಪ್ರಗತಿಪರವಾದುದಾಗಿದೆ. ಸಮಾಜದ ಸ್ವಾಸ್ಥವನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವಲ್ಲಿ ಇಂತಹ ಹಿರಿಯ ಜೀವಗಳ ವಿಚಾರವಂತಿಕೆಯ ನಡವಳಿಕೆ ತುಂಬಾ ಅಗತ್ಯವಾಗಿದೆ. ವಿಧವಾ ವಿವಾಹಗಳಲ್ಲಿನ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ–ಪುರುಷ ಸಮಾನತೆಯಂತಹ ವಿಷಯಗಳನ್ನು ಕುರಿತು ಲೇಖಕಿ ಮಾನವಪರವಾದ ನೆಲೆಯಲ್ಲಿ ಚಿಂತಿಸಿದ್ದಾರೆ. ವಿಧವಾ ಸ್ತ್ರೀ ತಾನು ಸ್ವಾವಲಂಬಿ ಬದುಕು ಸಾಧಿಸಲು ತನ್ನ ಯಾವ ನಿರ್ಧಾರದಲ್ಲಿ ಸತ್ವ ಅಡಗಿದೆ ಎಂಬುದನ್ನು ವಿಚಾರಪೂರ್ವಕವಾಗಿ ಶೋಧಿಸಿ, ಅದೇ ರೀತಿಯಲ್ಲಿ ಬದುಕುವಂಥ ಗಟ್ಟಿ ಮನಸ್ಸು ಮಾಡಿದಾಗ ಮಾತ್ರ ಪುನರ್ವಿವಾಹದಂತಹ ನಿರ್ಧಾರ ಸಮರ್ಥನೆ ಪಡೆದುಕೊಳ್ಳುತ್ತದೆ. ಮನುಷ್ಯ ಮಾನವೀಯತೆಯಿಂದ ವರ್ತನೆ ಮಾಡಿದರೆ ವಿಧವಾ ವಿವಾಹಗಳು ಅಸಾಧ್ಯವಾದುದೇನೂ ಅಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ನಡೆದಿರುವ ಕಾರ್ಯ ಚಟುವಟಿಕೆಗಳು ಸಮಾಜವನ್ನು ಪ್ರಗತಿಪರ ಹಂತಕ್ಕೆ ಕೊಂಡ್ಯೊಯ್ಯುವಲ್ಲಿ ಸಾಕಾಗುತ್ತಿಲ್ಲ. ಅವು ಇನ್ನಷ್ಟು ಪ್ರಖರವಾಗಿ ಭಿತ್ತರಗೊಂಡಾಗ ಮಾತ್ರ ಸಮಾನತೆಯ ಪತಾಕೆ ಎಲ್ಲಡೆ ಹಾರಿ, ವಿಧವಾ ವಿವಾಹವು ಯಶಸ್ವಿ ಹಾದಿಯತ್ತ ಸಾಗಲು ಸಾಧ್ಯವಾಗುತ್ತದೆ. ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬವಾದ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳನ್ನೆ ವಸ್ತುವಾಗಿರಿಸಿಕೊಂಡು ಕಾದಂಬರಿ ರಚಿಸಿದವರಲ್ಲಿ ಮುಕ್ತಾರವರು ಪ್ರಮುಖರು. ಸಮಾಜ ಎಷ್ಟು

ರೋಗಗ್ರಸ್ತವಾಗಿದೆ ಎಂಬುದನ್ನು ಸಾಹಿತ್ಯದ ಮೂಲಕ ಮನವರಿಕೆ ಮಾಡಿಕೊಡುವ ಇವರು, ತಮ್ಮ ಚಿಕಿತ್ಸಕಗುಣದಿಂದ ರೋಗನಿವಾರಣೆಗೆ ಪರಿಹಾರದ ರೂಪದಲ್ಲಿ ಮದ್ದನ್ನು ಸೂಚಿಸಿರುವುದು ಪ್ರಶಂಸನೀಯವಾಗಿದೆ.

'ಮಾತುಕೊಟ್ಟವಳು' ಕಾದಂಬರಿಯಲ್ಲಿ ಬಾಲ್ಯವಿವಾಹಕ್ಕೆ ಒಳಗಾಗಿ, ವಿಧವೆಯಾದ ಹೆಣ್ಣಿನ ಆತ್ಮವಿಶ್ವಾಸದ ನಡೆಯ ಚಿತ್ರಣವಿದೆ. ಮದುವೆಯ ಬಗೆಗೆ ಅರಿಯದ ವಯಸ್ಸಿನಲ್ಲೇ ವಿಧವೆಯಾಗುವ ಸೌಮ್ಯ ತನ್ನ ಜೀವನದ ಋಣಾತ್ಮಕ ಅಂಶಗಳನ್ನು ಧನಾತ್ಮಕವಾಗಿ ಬದಲಾಯಿಸಿಕೊಂಡು ಸುಂದರ ಬದುಕನ್ನು ನಿರ್ಮಿಸಿಕೊಂಡ ಛಲಗಾರ್ತಿ ಹೆಣ್ಣು ಮಗಳು. ಮಲತಾಯಿಯ ಬಲವಾದ ಧೋರಣೆಯ ನಡುವೆಯು ಉನ್ನತ ವಿದ್ಯಾಭ್ಯಾಸ ಪಡೆದು, ಉದ್ಯೋಗ ಪಡೆಯುವ ಆಕೆಯ ದೃಢಸಂಕಲ್ಪ ಬಲಿಷ್ಠವಾದುದಾಗಿದೆ. ಸಮಾಜದಲ್ಲಿ ವಿಧವಾ ಸ್ತ್ರೀಯರು ಹೇಗೆ ಸ್ವತಂತ್ರರಾಗಿ ಸ್ವಾಭಿಮಾನಿ ಜೀವನವನ್ನು ಕಟ್ಟಿಕೊಳ್ಳಬೇಕೆಂಬುದಕ್ಕೆ ಲೇಖಕಿ ರಚನೆಯ ಪ್ರತಿ ವಿಧವಾ ಪಾತ್ರಗಳು ಸಾಕ್ಷಿಯಾಗಿವೆ.

ಈ ಕಾದಂಬರಿಯಲ್ಲಿ ಕಂಡುಬರುವ ಕೆಲವು ಪಾತ್ರಗಳು ಸಂಪ್ರದಾಯದ ಗಡಿಯಿಂದ ಹೊರಬಂದು ವೈಚಾರಿಕತೆಯಿಂದ ವರ್ತಿಸಿದರೆ, ಕೆಲವು ಪಾತ್ರಗಳು ಸಂಪ್ರದಾಯದ ಮಡಿಲನ್ನು ಬಿಟ್ಟು ಹೊರಬರದೆ ವಿಧವಾ ಜೀವನವನ್ನು ವೈಭವೀಕರಿಸುತ್ತವೆ. ಕಾದಂಬರಿಯ ಹಿರಿಯ ಜೀವವಾದ ಆನಂದರಾಯರು ಹುಟ್ಟಿನಿಂದ ಸಂಪ್ರದಾಯವಾದಿಗಳಾದರೂ, ಬೆಳೆಯುತ್ತಾ ಆಧುನೀಕತೆಗೆ ತಮ್ಮನ್ನು ತೆರೆದುಕೊಂಡ ವಿಚಾರವಾದಿಗಳು. ವಿಧವೆ ಎಂಬ ವಿಷಯ ತಿಳಿದರೂ ಸೌಮ್ಯಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿ ಮನೆಮಗಳಂತೆ ಕಾಣುವ ಅವರ ಮಾನವೀಯ ಗುಣ ಎಲ್ಲರಲ್ಲೂ ಗೋಚರಿಸುವುದಿಲ್ಲ. ತಾನೊಬ್ಬಳು ವಿಧವೆ, ತಾನು ಸ್ಪರ್ಶಿಸಿದ ಹೂವು ದೇವರ ಪೂಜೆಗೆ ಯೋಗ್ಯವಲ್ಲ ಎಂಬ ಕೀಳರಿಮೆಯಿಂದ ಯೋಚಿಸುವ ಸೌಮ್ಯಳಿಗೆ, ಸೂಕ್ಷ್ಮ ರೀತಿಯಲ್ಲಿ ಬುದ್ಧಿವಾದ ಹೇಳುವ ರಾಯರ ವೈಚಾರಿಕ ಆಲೋಚನೆಗಳು ಗಮನಾರ್ಹವಾದುದು. "ನಿಮ್ಮ ಚಿಕ್ಕಮ್ಮಂಗೆ ಬುದ್ಧಿ ಇಲ್ಲ, ಜನ ತಮ್ಮ ಅನುಕೂಲಕ್ಕೆ ತಕ್ಕಂತೆ ರೀತಿ, ರಿವಾಜು, ಸಂಪ್ರದಾಯ ಮಾಡಿಕೊಂಡಿದ್ದಾರಮ್ಮ. ಆದರೆ ದೇವರಿಗೆ ಅದೆಲ್ಲಾ ಬೇಡ, ಅವನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಹೋಗು ನಾನು ಹೇಳ್ತಿದ್ದೇನೆ ಕಿತ್ಕೊಂಡು ಬಾ"[2] ಉನ್ನತ ವ್ಯಾಸಂಗ ಪಡೆದಿದ್ದರೂ ಚಿಕ್ಕಮ್ಮನ ಕಟ್ಟುನಿಟ್ಟಿನ ನಿಯಮಗಳ ಪಾಲನೆಯಲ್ಲಿ ಸ್ವಂತಿಕೆಯನ್ನೇ ಮರೆಯುವ ಸೌಮ್ಯ, ವಿಧವಾ ಜೀವನದ ಬಗೆಗೆ ಸಂಕುಚಿತ ಮನೋಭಾವನೆ ಬೆಳೆಸಿಕೊಂಡಿರುತ್ತಾಳೆ. ಆದರೆ ರಾಯರ ಆಶಾದಾಯಕ ನುಡಿಗಳು ಅವಳಲ್ಲಿ ಆಶಾದೀಪವಾಗಿ ಅವಳ ಬದುಕಿಗೆ ಬೆಳಕಾಗುತ್ತದೆ. ಕಾಲವೆನ್ನುವುದು ಸದಾಕಾಲ ವೈರುಧ್ಯಗಳನ್ನು

ಒಳಗೊಳ್ಳುತ್ತಲೇ ಸಮಾಜವನ್ನು ತಿಳಿಗೊಳಿಸುವ ಹೋರಾಟದ ವ್ಯಾಪಕ ಹಂತವಾಗಿ ಮಹತ್ವ ಪಡೆದುಕೊಂಡಿದೆ. ಈ ವೈರುಧ್ಯಗಳು ಮತ್ತು ಅವನ್ನು ಮೀರುವ ಒಳಹೋರಾಟದ ನೆಲೆ–ನಿಲುವುಗಳನ್ನು ಹಿರಿಯ ಜೀವಗಳಲ್ಲಿ ತರುವ ಲೇಖಕಿಯ ಬರವಣಿಗೆ ವಿಶ್ವಾಸಾರ್ಹವಾಗಿವೆ.

ಇದೇ ಕಾದಂಬರಿಯಲ್ಲಿ ಕಂಡುಬರುವ ಸಂತೋಷ್‌ನ ಪಾತ್ರವು ವಿಧವೆಯಾದ ಸೌಮ್ಯಳಿಗೆ ವಿಧವಾ ಜೀವನದಿಂದ ಮುಕ್ತಿ ನೀಡುವ ಉದಾರ ಪಾತ್ರವಾಗಿ ಸೃಷ್ಟಿಗೊಂಡಿದೆ. ಆನಂದರಾಯರ ಕಿರಿಯ ಮಗನಾದ ಸಂತೋಷ್, ವೃತ್ತಿಯಲ್ಲಿ ವೈದ್ಯನಾಗಿರುತ್ತಾನೆ. ವಿಧವೆಯರ ಬಗೆಗೆ ಅನುಕಂಪ ನೆಲೆಯಲ್ಲಿ ಯೋಚಿಸುವ ಮತ್ತು ವಿಧವೆಯಾದ ಸೌಮ್ಯಳಿಗೆ ಸುಂದರ ಬದುಕು ನೀಡುವ ಸಂತೋಷ್‌ನ ವ್ಯಕ್ತಿತ್ವ ಮಾನವೀಯ ನೆಲೆಯದು. "ಹದಿನೈದು ವರ್ಷಕ್ಕೆ ಗಂಡ ಸತ್ತಾಂತ, ಇವಳು ಯಾಕೆ ಹೂವು ಕುಂಕುಮ ಇಟ್ಟುಕೊಳ್ಳಬಾರದು? ಅರ್ಥವಿಲ್ಲದ ಸಂಪ್ರದಾಯಕ್ಕೆ ಯಾಕೆ ಬೆಲೆ ಕೊಡಬೇಕು? ನೀವೆಲ್ಲಾ ಬುದ್ಧಿ ಹೇಳಬಾರದಾ? ಮದುವೆಗೆ ಮುಂಚೆ ಹೆಣ್ಣು ಮಕ್ಕಳು ಕುಂಕುಮ, ಹೂವು ಇಟ್ಟುಕೊಳ್ಳಲ್ವಾ?"[3] ಭಾರತೀಯ ಸಮಾಜದ ಹಿನ್ನೆಲೆಯಲ್ಲಿ ವಿಧವಾ ಸ್ತ್ರೀಯನ್ನು ವಿವಾಹವಾಗುವ ತೀರ್ಮಾನಗಳು ಅಷ್ಟು ಸುಲಭವಾದುದಲ್ಲ. ಆದರೆ ಸಮಾಜದಲ್ಲಿ ವಿಧವಾ ಸ್ತ್ರೀಯರ ಮೇಲೆ ಉಂಟಾಗುವ ಶೋಷಣೆಯ ವಿಚಾರಗಳನ್ನು ತಿಳಿದುಕೊಂಡಾಗ ಪುರುಷರು ತೆಗೆದುಕೊಳ್ಳುವ ವಿಧವಾ ವಿವಾಹದಂತಹ ನಿರ್ಧಾರಗಳು ನಿಜಕ್ಕೂ ಆಶ್ಚರ್ಯವೆನಿಸುವುದಿಲ್ಲ. ವಾಸ್ತವಿಕ ಮತ್ತು ವೈಚಾರಿಕ ಪ್ರಜ್ಞೆಯಿಂದ ಯೋಚಿಸುವ ಸಂತೋಷ್‌ನಂತಹ ಹಲವಾರು ಪಾತ್ರಗಳು 'ವಿಧವೆ' ಎಂಬ ಭ್ರಮೆಯಿಂದ ಹೊರಗುಳಿದು, ಅವರಿಗೆ ಬದುಕು ನೀಡಲು ಮುಂದಾಗುವುದು ಸಮಾಜದ ಆರೋಗ್ಯಕರ ಬೆಳವಣಿಗೆಯಾಗಿದೆ. ಹೆಣ್ಣಿನ ವಿಷಯದಲ್ಲಿ ನಮ್ಮ ಸಮಾಜದ ಪುರುಷರು ಇನ್ನೂ ಇಷ್ಟೊಂದು ಉದಾರವಾಗಿಲ್ಲ. ಆದರೂ ಕಾಲಘಟ್ಟಕ್ಕೆ ತಕ್ಕಂತೆ ನಿಧಾನವಾಗಿಯಾದರೂ ಸಾಂಪ್ರದಾಯಿಕ ನಂಬಿಕೆಗಳಿಂದ ಹೊರಬಂದು ತಮ್ಮ ದೌರ್ಬಲ್ಯಗಳಿಂದ ದೂರ ಸರಿಯುತ್ತಿರುವ ಪುರುಷ ಪಾತ್ರಗಳು, ಸ್ತ್ರೀ ಸ್ವಾತಂತ್ರವನ್ನು ಕುರಿತು ವಿವೇಚನೆಯಿಂದ ನಡೆದುಕೊಳ್ಳುತ್ತಿರುವುದು ಸಮಾಜದಲ್ಲಿ ಉತ್ತಮ ಬದಲಾವಣೆಯೇ ಆಗಿದೆ.

ಇದೇ ಕಾದಂಬರಿಯಲ್ಲಿ ಕಂಡುಬರುವ ಮತ್ತೊಂದು ಮಾನವೀಯ ಅಂತಃ ಕರಣವುಳ್ಳ ಪಾತ್ರ ಜಾನಕಮ್ಮನದು. ಮನೆಯ ಹಿರಿಯ ಸೊಸೆಯಾದ ಈಕೆ, ತನ್ನ ಉತ್ತಮ ನಡೆಯಿಂದ ಕುಟುಂಬದ ಎಲ್ಲಾ ಸದಸ್ಯರಿಗೆ ಬಹುಪ್ರಿಯಳಾಗಿರುತ್ತಾಳೆ. ತನ್ನ ಅಳಿದ ಮಗುವಿನ ಛಾಯೆಯನ್ನು ಸೌಮ್ಯಳಲ್ಲಿ ಕಾಣುವ ಜಾನಕಮ್ಮನಿಗೆ

ಚಿಕ್ಕವಯಸ್ಸಿಗೆ ವಿಧವೆಯಾದ ಸೌಮ್ಯಳ ವಿಧವಾ ಬದುಕನ್ನು ಸರಿಪಡಿಸುವ ತವಕ. ಸೌಮ್ಯಳ ಖಾಲಿ ಹಣೆಗೆ ಕುಂಕುಮವಿಡುವ ಮೂಲಕ ಇನ್ನು ಮುಂದೆ ಹಣೆಗೆ ಕಪ್ಪು ಸೋಕಿಸಬಾರದೆಂದು ಪ್ರೀತಿಯಿಂದ ಗದರಿ ಹೇಳುವ ಜಾನಕಮ್ಮನದು ಮಾತೃ ಹೃದಯವೇ ಸರಿ. ಹಾಗೆಯೇ ಮುಂದೆ ಯಾರಾದರು ಉತ್ತಮ ವ್ಯಕ್ತಿ ಸೌಮ್ಯಳನ್ನು ಮರುಮದುವೆಯಾಗಲು ಒಪ್ಪಿ ಬಂದರೆ ಅವಳ ಚಿಕ್ಕಮ್ಮನನ್ನು ಒಪ್ಪಿಸಿ ಮದುವೆ ಮಾಡಬೇಕೆಂದು ಸಂಪ್ರದಾಯವಾದಿಗಳಾದ ತನ್ನ ಮಾವನ ಬಳಿ ಮನವಿ ಮಾಡಿಕೊಳ್ಳುವ ಜಾನಕಮ್ಮನದು ಮಾನವೀಯ ನೆಲೆಯಿಂದ ಕೂಡಿದ ಆಧುನಿಕ ಮನೋಭಾವವಾಗಿದೆ. ಸಮಾಜದಲ್ಲಿ ವಿಧವಾವಿವಾಹ ಮಾಡುತ್ತೇವೆಯೆಂದು ಮಾತನಾಡುವುದು ಕೂಡ ಮಹಾ ಅಪರಾಧವಾಗಿದ್ದ ಮನೆತನದಲ್ಲಿ ನೆಲೆಸಿದ ಮಹಿಳೆಯರು ವಿಧವಾವಿವಾಹದ ಕೀಳರಿಮೆಯಿಂದ ಹೊರಬಂದು ವಿಧವೆಯರಿಗೆ ವಿವಾಹಯೋಗ ಕಲ್ಪಿಸಿಕೊಡಬೇಕೆಂದು ಹೋರಾಡುವುದು ಸಮಾಜದ ಸಕಾರಾತ್ಮಕ ಬೆಳವಣಿಗೆಯ ಮುನ್ನೋಟವೇ ಆಗಿದೆ.

ಸಮಾಜದ ವಾಸ್ತವ ಅಂಶಗಳನ್ನು ಕಾದಂಬರಿಯಲ್ಲಿ ತರುವ ಲೇಖಕಿ ವಿಧವೆಯರ ವಿಷಯದಲ್ಲಿ ಸಮಾಜ ಎಷ್ಟೊಂದು ಕ್ರೂರವಾಗಿ ವರ್ತಿಸುತ್ತದೆ ಎಂಬುದನ್ನು ರಾಧಾ ಪಾತ್ರದ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ. ಸಂಪ್ರದಾಯದ ನಿಯಮಗಳೇ ಸರಿ ಎಂದು ವಾದಿಸುವ ರಾಧಾ, ವಿಧವೆಯಾದ ಸೌಮ್ಯಳ ಬಾಳಿನಲ್ಲಿ ಒದಗಿಬಂದ ವಿಧವಾವಿವಾಹವೆಂಬ ಅದೃಷ್ಟದ ಬಗೆಗೆ ಅಸೂಯೆ ವ್ಯಕ್ತಪಡಿಸುತ್ತಾಳೆ. ಸೌಮ್ಯಳ ಬದಲಾದ ಜೀವನದ ಬಗೆಗೆ ಕೊಂಕು ನುಡಿಯುವ ರಾಧಾಳಲ್ಲಿ ಅಜ್ಞಾನ ಮನೆಮಾಡಿರುತ್ತದೆ. ವಿದ್ಯಾವಂತ ಹೆಣ್ಣು ಮಗಳಾಗಿ ಸಂಪ್ರದಾಯದ ಅಂಧತ್ವವನ್ನು ಮೈತುಂಬಿಕೊಂಡ ರಾಧಾ, ಸೌಮ್ಯಳ ಬಾಳಿನಲ್ಲಿ ಅನಾವಶ್ಯಕವಾಗಿ ದ್ವಂದ್ವ ಸೃಷ್ಟಿಸುತ್ತಾಳೆ. "ಹಾಗಾದ್ರೆ ಇದು ಬಯಸದೆ ಬಂದ ಭಾಗ್ಯ ಅಲ್ವಾ? ಸಾಯುವ ವ್ಯಕ್ತಿ ಕೈಲಿ ಏನೆನೋ ಹೇಳಿಸಿ, ಆಣೆ ಇಡಿಸಿದ ತಕ್ಷಣ ನೀನು ವಿಧವೆ ಅನ್ನೋದು ಅಳಿಸಿ ಹೋಗುತ್ತಾ? ಚೆನ್ನಾಗಿ ನಾಟಕವಾಡ್ತಿದ್ದೀಯ?"[4] ವಿಧವಾವಿವಾಹದಂತಹ ಹೊಸ ವಿಚಾರಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಲಾಗದ ಇಂತಹ ಮಹಿಳೆಯರು, ವಿಧವೆಯರ ಜೀವನದಲ್ಲಿ ಕಂಡುಬರುವ ಸಕಾರಾತ್ಮಕ ಬದಲಾವಣೆಗಳನ್ನು ವಿರೋಧಿಸಿ, ಹಾಸ್ಯಾಸ್ಪದವಾಗಿ ವಿಡಂಬನೆ ಮಾಡುವ ಸಂಗತಿಗಳು ಸಮಾಜದಲ್ಲಿ ಕಂಡುಬರುತ್ತಿವೆ. ವಿಧವಾ ಆಚರಣೆಗಳ ವಿಷಯದಲ್ಲಿ ಮಹಿಳಾ ಸಮಾಜ ನೋಡುತ್ತಿರುವ ದೃಷ್ಟಿಕೋನ ಬದಲಾಗಬೇಕೆಂಬುದು ಈ ಕಾದಂಬರಿ ರಚನೆಯ ಮೂಲ ಆಶಯಗಳಲ್ಲಿ ಒಂದಾಗಿದೆ.

ಚಿಕ್ಕವಯಸ್ಸಿಗೇನೆ ವಿಧವೆಯಾದ ಮಲಮಗಳ ವೈಧವ್ಯದ ಬಗೆಗೆ

ಮರುಕಪಡದ ಸೌಮ್ಯಳ ಚಿಕ್ಕಮ್ಮ ಒಬ್ಬ ಹಣದಾಹಿ ಮಹಿಳೆ. ಮಲಮಗಳ ವೈಧವ್ಯ ಜೀವನದ ಬಗೆಗೆ ಕರುಣೆ ಹೊಂದದೆ ಸಂಪ್ರದಾಯ ದೃಷ್ಟಿಯ ನೆಲೆಯಲ್ಲಿ ಹಿಂಸಿಸುವ ಆಕೆಯ ನಡೆ ಕ್ರೂರವಾದುದು. ಸೌಮ್ಯಳ ಹಣೆಯಲ್ಲಿನ ಕುಂಕುಮವನ್ನು ನೋಡಿ ಅವಳ ಬದಲಾದ ಜೀವನಶೈಲಿಗೆ ಕಿಡಿಕಾರುವ ರಾಜಮ್ಮ ಲೋಕಜ್ಞಾನವಿಲ್ಲದೆ ಬೆಳೆದ ಜಡ ಮಹಿಳೆ. ವೈಧವ್ಯದ ವಿಷಯದಲ್ಲಿ ಹೆಣ್ಣಿಗೆ ಮಾತ್ರ ಇಂತಹ ಅನಾವಶ್ಯಕ ಆಚರಣೆಗಳನ್ನು ತಂದು, ಬಿಗಿಯಾದ ಕಟ್ಟುಪಾಡು ವಿಧಿಸುವ ಸಮಾಜದ ನಡೆ ಘೋರವಾದುದು. ವಾಸ್ತವ ದೃಷ್ಟಿಯಲ್ಲಿ ಸಮಾಜದಿಂದ ಹೆಣ್ಣಿಗೆ ಯಾವುದೇ ಕಟ್ಟುಪಾಡುಗಳಿಲ್ಲ. ಆಕೆ ಹುಟ್ಟಿನಿಂದ ಸರ್ವಸ್ವತಂತ್ರಳಾಗಿದ್ದು, ತನಗೆ ಬೇಕಾದ ರೀತಿಯ ಜೀವನ ನಡೆಸಲು ಅರ್ಹಳಾಗಿರುತ್ತಾಳೆ. ಆದರೆ ಇದನ್ನು ಅರಿಯದೆ ಅವಕಾಶಗಳ ಮಧ್ಯೆ ಸಾಧನೆಯ ಹಾದಿಯತ್ತ ಸಾಗುವ ವಿಧವೆಯರಿಗೆ ಪ್ರಾಮುಖ್ಯತೆ ಕೊಡದ ಹೆಣ್ಣಿನ ವಿಕರ್ಷಣೆಯ ಪಾತ್ರ ಇಲ್ಲಿದೆ. ಹೆಣ್ಣಿನ ಸುಮಂಗಲಿತನ ಮತ್ತು ವಿಧವಾ ಸ್ಥಿತಿಯ ಬಗೆಗೆ ಸಮಾಜದ ಸಾಂಪ್ರದಾಯಿಕ ವ್ಯವಸ್ಥೆಯು ಹಲವಾರು ಮೌಢ್ಯಕಲ್ಪನೆಗಳನ್ನು ಒಳಗೊಂಡಿದೆ.

ಸ್ತ್ರೀಯರಿಗೆ ವೈಧವ್ಯವೆಂಬುದು ಒದಗಿಬಂದರೆ ಆಕೆಯ ಬದುಕಿನ ದಾರಿಯೇ ಬದಲಾಗಿಬಿಡುತ್ತದೆ. ವೈಧವ್ಯವೆಂಬುದು ಅಮಂಗಲ, ಅಶುಭವೆಂದು ಭಾವಿಸುವ ಸಮಾಜದ ಜನರು ವಿಧವೆಗೆ ಯಾವುದೇ ಸಾಮಾಜಿಕ ಸ್ಥಾನಮಾನಗಳನ್ನು ನೀಡಲು ಇಚ್ಛಿಸುವುದಿಲ್ಲ. ಮುತ್ತೈದೆತನ ಮತ್ತು ವೈಧವ್ಯ ಇವೆರಡೂ ಸಂಸ್ಕೃತಿಯ ವೈರುಧ್ಯಗಳಾಗಿ ಮಹಿಳಾ ಬದುಕನ್ನು ನಿಯಂತ್ರಿಸುತ್ತವೆ. ಶೀತೆ ಬಿ. ಎಸ್. ರವರು ಗುರುತಿಸುವಂತೆ "ಗಂಡು ಹೆಣ್ಣು ಸಮಾನವೆಂಬ ಭಾವನೆಗಳು ಇತಿಹಾಸದ ಗರ್ಭದಲ್ಲಿ ಮರೆಯಾಗಿ ಗಂಡು ಪ್ರಧಾನ, ಶ್ರೇಷ್ಠ ಎಂಬ ಭಾವನೆಗಳು ಬಲಿಷ್ಟವಾಗುತ್ತಿದ್ದಂತೆಯೇ ಪತಿ–ಪತ್ನಿ ವ್ಯವಸ್ಥೆಯಲ್ಲಿಯೂ ಕೆಲವು ಮಾರ್ಪಾಟುಗಳು ಕಂಡುಕೊಂಡವು. ಪತಿ ಕುಟುಂಬ ಜೀವನದಲ್ಲಿ ಪ್ರಾಮುಖ್ಯವೆನಿಸಿ ಪತ್ನಿ ಎರಡನೆಯ ಸ್ಥಾನ ಪಡೆಯುವಂತಾದಳು. ಈ ಸಂಧರ್ಭದಲ್ಲಿ ಹೆಣ್ಣಿನ ನಡತೆ, ಶೀಲ, ಸೇವೆ, ಭಕ್ತಿ ಮೊದಲಾದವುಗಳನ್ನು ಪುರುಷ ಅಪೇಕ್ಷಿಸುವಂತಾಯಿತು. ಈ ಒಂದು ಹಿನ್ನಲೆಯಲ್ಲಿ ಪಾತಿವ್ರತ್ಯ ಕಲ್ಪನೆಯೂ ಬೆಳೆದು ಬಂತು. ಈ ಆವಿಷ್ಕಾರವಾದಂದಿನಿಂದ ಪುರುಷನ ಸ್ವತ್ತು ಸ್ತ್ರೀ ಎಂಬ ತಿಳುವಳಿಕೆಗೆ ದಾರಿ ಮಾಡಿಕೊಟ್ಟಿತೆಂದೇ ಹೇಳಬೇಕು. ಗಂಡನ ಅಸ್ತಿತ್ವವನ್ನು ಮುತ್ತೈದೆ ಎಂಬ ಪರಿಕಲ್ಪನೆಯಲ್ಲಿ ಕಂಡುಕೊಳ್ಳಲು ಪ್ರಾರಂಭಿಸಿದರು. ಮುತ್ತೈದೆ ಮಂಗಳವೆನಿಸಿದರೆ ಮುತ್ತೈದೆಯಲ್ಲದವಳು ಅಮಂಗಳವೆನಿಸಿದಳು. 'ಧೀರ್ಘ ಸುಮಂಗಲೀಭವ' 'ಅಖಂಡ ಸೌಭಾಗ್ಯವತೀಭವ' ಈ ಮೊದಲಾದ ಸಾಲುಗಳು ಶ್ರೇಷ್ಠತೆಯನ್ನು, ಪತ್ನಿಯ ಮಂಗಳತೆ, ಪಾತೀವ್ರತೆಗಳನ್ನು ಸೂಚಿಸುವ ತತ್ವಗಳಾಗಿವೆ"[5] ಇಂತಹ

ಸಮಾಜದ ಕ್ರೂರ ನಿಯಮಗಳು ಮಹಿಳಾ ಬದುಕನ್ನು ಸಾಮಾಜಿಕ ನೆಲೆಯಿಂದ ವಂಚಿಸಿದ್ದು, ಸಮಾಜದ ಸ್ಥಾನವನ್ನು ಅಮೌಲ್ಯೀಕರಿಸುತ್ತಿವೆ.

ಎಲ್ಲಾ ಅಡೆತಡೆಗಳ ನಡುವೆಯೂ ತನ್ನ ಮನಸ್ಸಿನಲ್ಲಿ ಹುಟ್ಟಿಕೊಳ್ಳುವ ಆಕರ್ಷಣೆಯಿಂದ ತನಗೆ ಜೀವನದಲ್ಲಿ ಬೇಕಿದ್ದನ್ನು ದೊರಕಿಸಿಕೊಳ್ಳಲು ಆಗದಿದ್ದರೂ, ದೊರಕಿದ್ದನ್ನು ಹಂಬಲಿಸಿ ಪಡೆಯಲು ಮುಂದಾಗುವ ಸೌಮ್ಯಳ ಜೀವನ ಸುಖಾಂತ್ಯಗೊಳ್ಳುತ್ತದೆ. ತನ್ನೆಲ್ಲಾ ಆಸೆ–ಕನಸುಗಳನ್ನು ಬದಿಗಿಟ್ಟು ಸಮಾಜದ ನಿಯಮವನ್ನು ಪಾಲಿಸಬಯಸುವ ಸೌಮ್ಯ ಏಕಾಏಕಿ ಸಂಪ್ರದಾಯವನ್ನು ಧಿಕ್ಕರಿಸುವುದಿಲ್ಲ. ತನ್ನ ಮುಗ್ಧತೆಯನ್ನು ಅಜ್ಞಾನವೆಂದು ಭಾವಿಸಿದ ಸಮಾಜದ ಜನರ ಬಗೆಗೆ ತಲೆಕೆಡಿಸಿಕೊಳ್ಳದ ಸೌಮ್ಯ ಸಂಪ್ರದಾಯದ ವಿಷವ್ಯೂಹದಿಂದ ಹೊರಬಂದು ತನ್ನ ಚಿಕ್ಕಮ್ಮನನ್ನು ಪ್ರಶ್ನಿಸಿ, ಪ್ರತಿಭಟಿಸುವುದು ಅವಳಲ್ಲಿ ಬೆಳೆದ ಆತ್ಮವಿಶ್ವಾಸವನ್ನು ಪ್ರದರ್ಶಿಸುತ್ತದೆ. ಮೊದಮೊದಲು ಜನರ ವಿಚಾರಗಳಿಗೆ ತಲೆಕೆಡಿಸಿಕೊಳ್ಳುತ್ತಿದ್ದ ಸೌಮ್ಯ "ತನ್ನ ಜೀವನ ನಿರ್ಧಾರ ತನಗೆ ಸಂಬಂಧಿಸಿದ್ದು" ಎಂದು ಭಾವಿಸಿ ಪುನರ್ವಿವಾಹದಂತಹ ಗಟ್ಟಿ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಸಶಕ್ತವಾದ ಪ್ರತಿಭಟನೆಯ ಮೂಲಕ ವಿಧವೆಯರು ಈಗ ತಮ್ಮ ಹಕ್ಕುಗಳನ್ನು ಪಡೆಯುತ್ತಿದ್ದಾರೆ. ಯಾರನ್ನು ಮೊದಲು ಅಬಲೆ ಎಂದು ಭಾವಿಸಿ, ಎಲ್ಲ ಕಾರ್ಯಗಳಿಂದಲೂ ದೂರವಿರಿಸಲಾಗಿತ್ತೋ ಅಂತಹ ಮಹಿಳೆಯರು ಸರಿ–ತಪ್ಪುಗಳ ವಿವೇಚನೆ ಮಾಡಿ ಮುಂದಡಿಯಿಡುವ ಪರಿಕ್ರಮ ಇಂದು ರೂಢಿಗೊಳ್ಳುತ್ತಿದೆ. ಕೇವಲ ಶಿಕ್ಷಣ ಪಡೆದ ಪೀಳಿಗೆ ಮಾತ್ರವಲ್ಲದೆ ಹಳ್ಳಿಗಾಡಿನ ನಿರಕ್ಷರಿ ಹೆಣ್ಣು ಮಕ್ಕಳೂ ಕೂಡ ಸರಿಯಾದ ವಿವೇಚನ ಕ್ರಮದ ಮೂಲಕ ಬದುಕನ್ನು ಕಟ್ಟಿಕೊಳ್ಳುವ ಹಂಬಲವನ್ನು ವ್ಯಕ್ತಪಡಿಸಿದ್ದು, ಸಂಪ್ರದಾಯವನ್ನು ಪರಾಮರ್ಶೆಗೆ ಒಳಪಡಿಸುತ್ತಿದ್ದಾರೆ.

ಆರ್ಥಿಕ ಸ್ವಾತಂತ್ರ್ಯದ ಜೊತೆಗೆ ಗೊಡ್ಡು ಸಂಪ್ರದಾಯಕ್ಕೆ ಜೋತು ಬೀಳದ ವೈಜ್ಞಾನಿಕ ದೃಷ್ಟಿ ಹೊಂದಿದ ವಿಧವೆಯರು ಸಮಾನತೆಗಾಗಿ ಹೋರಾಡುವ ಹೊಸದೃಷ್ಟಿ ಕಾದಂಬರಿಯಲ್ಲಿದೆ. ಹೆಣ್ಣಿನ ಮನಸ್ಥಿತಿ ಹಿಂದಿನಕ್ಕಿಂತ, ಪ್ರಸ್ತುತದಲ್ಲಿ ತುಂಬಾ ಪರಿವರ್ತನೆ ಹೊಂದಿದೆ. ಮುಂದುವರೆದ ವೈಜ್ಞಾನಿಕ ವಿಚಾರದಿಂದ ಆಕರ್ಷಿತರಾಗುವ ವಿಧವಾ ಪಾತ್ರಗಳು ಲೇಖಕಿಯ ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವಂತ ಮಾರ್ಗದರ್ಶಕ ಪಾತ್ರಗಳಾಗಿ ರಚನೆಯಾಗಿವೆ. ಹೀಗೆ ಬದಲಾಗುತ್ತಿರುವ ಸಮಾಜದಲ್ಲಿ ಕಂಡುಬರುವ ಮೌಲ್ಯಗಳ ಸ್ಥಿತ್ಯಂತರಗಳು ಮಹಿಳಾ ಕಾದಂಬರಿಗಳಲ್ಲಿ ಪ್ರತಿಫಲಿಸಿದ್ದು ಮಾತ್ರವಲ್ಲದೇ, ಎಷ್ಟೋ ಮಹಿಳಾ ಕಾದಂಬರಿಗಳು ಸಮಾಜದಲ್ಲಿನ ಮೌಲ್ಯಗಳ ಸ್ಥಿತ್ಯಂತರಕ್ಕೂ ಕಾರಣವಾಗಿವೆ. ಈ ಸಾಲಿನಲ್ಲಿ ಮುಕ್ತಾರವರ ಕಾದಂಬರಿಗಳು ಪ್ರಮುಖ ಸ್ಥಾನ ಪಡೆದಿವೆ.

ಸಹಜ ಜೀವಂತಿಕೆಯ ಕಲಾತ್ಮಕ ಪಾತ್ರವಾಗಿ 'ಪ್ರೇಮಸಂಗಮ' ಕಾದಂಬರಿಯ ಚಿನ್ನಮ್ಮನ ಪಾತ್ರ ಮೂಡಿಬಂದಿದೆ. ಸಂಪ್ರದಾಯ ಮನೆತನದ ಹಿರಿಯ ಜೀವ ಚಿನ್ನಮ್ಮ, ಸೊಸೆಯ ವೈಧವ್ಯ ಜೀವನದ ಬಗೆಗೆ ಚಿಂತಿಸುವ ಮತ್ತು ಸೊಸೆ ಕೈಗೊಂಡ ಮರುವಿವಾಹದಂತಹ ನಿರ್ಧಾರವನ್ನು ಬೆಂಬಲಿಸುವ ಪ್ರಜ್ಞಾಪೂರ್ವ ಪಾತ್ರವಾಗಿ ಸೃಷ್ಟಿಗೊಂಡಿದೆ. ತನ್ನ ಮಗನನ್ನು ವಿವಾಹವಾದ ಹುಡುಗಿ, ಗಂಡ ಸತ್ತ ಮೇಲೆ ಇನ್ನೊಂದು ಮದುವೆ ಆಗಿ ಖುಷಿಯಾಗಿರುವ ಸಂಗತಿ ಕೇಳಿ ಬೇಸರಿಸುವ, ಕೋಪಗೊಳ್ಳುವ ಸಂಕುಚಿತ ಅತ್ತೆಯರ ನಡುವೆ ಚಿನ್ನಮ್ಮನ ಪಾತ್ರ ಭಿನ್ನವಾದುದು. ಸೊಸೆಯ ಮರುವಿವಾಹದ ಬಗೆಗೆ ಮತ್ತು ಮರುವಿವಾಹವಾದಂತಹ ಹುಡುಗನ ಬಗೆಗೆ ಸದಭಿಪ್ರಾಯ ಹೊಂದಿ ಆಶೀರ್ವಾದ ಮಾಡುವ ಇಂತಹ ಅತ್ತೆ ಪಾತ್ರಗಳು ಆಧುನಿಕ ಜಗತ್ತಿನಲ್ಲಿ ತುಂಬಾ ವಿರಳ, "ನಮ್ಮ ತಾಯಿ ಹಳೆ ಕಾಲದವರಾದರೂ ಹಳೆ ಕಾಲದವರಂತಿಲ್ಲ, ಅತ್ತಿಗೆಗೆ ಬೇರೆ ಮದುವೆ ಆಯ್ತು ಅಂತ ಕೇಳಿ ಎಷ್ಟು ಸಂತೋಷ ಪಟ್ರು ಗೊತ್ತಾ? ಅವರನ್ನು... ಮದುವೆ ಆಗಿರುವ ಹುಡುಗನನ್ನೂ ನೋಡಬೇಕೂಂತ ತುಂಬಾ ಆಸೆ ಅವರಿಗೆ."[6] ತನ್ನಂತೆ ಇರುವ ಇನ್ನೊಂದು ಹೆಣ್ಣಿನ ನೋವಿಗೆ ಮಿಡಿಯುವ ಕ್ರಿಯೆಯಲ್ಲಿ ಚಿನ್ನಮ್ಮನ ವಿಚಾರವಂತಿಕೆ ಸಾರ್ಥಕತೆ ಪಡೆದಿದೆ. ಮನುಷ್ಯನ ಭಾವ, ಸಂವೇದನೆಗಳು ಆಧುನಿಕತೆಗೆ ಒಗ್ಗಿಕೊಳ್ಳುವ ಸಂದರ್ಭಗಳಲ್ಲಿ ತನ್ನ ಪೂರ್ವದೃಷ್ಟಿ ಮತ್ತು ಧೋರಣೆಗಳನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಸಂಪ್ರದಾಯ ಬದ್ಧ ಮುಸುಕಿನ ತೆರೆಯನ್ನು ಸರಿಸಿ, ತನ್ನ ಬದುಕಿನ ಸುತ್ತ ಹರಡಿಕೊಂಡ ಹಲವು ನಂಬಿಕೆಗಳ ವ್ಯೂಹದಿಂದ ಹೊರಬಂದು ಸೊಸೆಯ ಭವಿಷ್ಯದ ಬಗ್ಗೆ ಯೋಚಿಸುವ ಚಿನ್ನಮ್ಮನ ವಿಚಾರಧಾರೆಯು ತಿಳುವಳಿಕೆಯ ಫಲವಾಗಿದೆ. ತಮ್ಮ ದೌರ್ಬಲ್ಯದ ಬಿಳಿಯ ಪರದೆಯನ್ನು ಸರಿಸಿ, ವೈಧವ್ಯದ ಪ್ರತೀಕವಾದ ಬಿಳಿಸೀರೆಯಿಂದ ಬಣ್ಣದ ಸೀರೆಗೆ ಮನಸ್ಸು ಬದಲಾಯಿಸಿಕೊಳ್ಳುವ ಸ್ತ್ರೀ ಪಾತ್ರಗಳು ತಮ್ಮ ವ್ಯಕ್ತಿತ್ವಕ್ಕಿಂತ, ಅಸ್ತಿತ್ವವನ್ನೇ ಪ್ರಧಾನವಾಗಿ ನಂಬಿದಂತೆ ಕಾದಂಬರಿಯಲ್ಲಿ ಗೋಚರಿಸುತ್ತವೆ.

ಯುವಪೀಳಿಗೆಯ ವಿಚಾರವಂತಿಕೆಯ ನಿರ್ಧಾರಗಳಿಗೆ ಬೆಂಬಲ ನೀಡಿ ಒಪ್ಪಿಕೊಳ್ಳುವುದು ಹಿರಿಯರ ಗುರುತರವಾದ ಜವಾಬ್ದಾರಿಯೆಂದು ಭಾವಿಸುವ ಚಿನ್ನಮ್ಮ, ಸೊಸೆಯ ಪ್ರೌಢಿಮೆಯ ನಿರ್ಧಾರಕ್ಕೆ ತನ್ನ ಸಂಪ್ರದಾಯದ ಮೌಢ್ಯ ವಿಚಾರಗಳು ಮಧ್ಯೆ ಪ್ರವೇಶಿಸದಂತೆ ಎಚ್ಚರ ವಹಿಸುತ್ತಾಳೆ. ಆ ಮೂಲಕ ಈಗಿನ ಕಾಲದ ಜನರ ವೈಚಾರಿಕತೆಯನ್ನು ಪ್ರೋತ್ಸಾಹಿಸುವ ಉತ್ಸಾಹವನ್ನು ಆಕೆ ತೋರುತ್ತಾಳೆ. ಕುಟುಂಬದಲ್ಲಿ ಅಧಿಕ ವಿಮರ್ಶಕ ಬುದ್ಧಿ ಮತ್ತು ವಿಚಾರ ಸ್ವಾತಂತ್ರ್ಯ ಹೊಂದಿರುವ ಹಿರಿಯ ವ್ಯಕ್ತಿಗಳು ವಿಧವಾವಿವಾಹವನ್ನು ಕುರಿತು ಈ ಬಗೆಯ

ತೀರ್ಮಾನಕ್ಕೆ ಬಂದರೆ ವಿಧವಾವಿವಾಹಗಳಲ್ಲಿ ಯಾವ ಬಗೆಯ ತೊಂದರೆಯೂ ಆಗುವುದಿಲ್ಲ. ಆದರೆ ಕುಟುಂಬದಲ್ಲಿಲ್ಲದ ಇಂತಹ ವಿಚಾರವೇದಿಕೆಯನ್ನು, ಸಮಾಜದಲ್ಲಿ ನಿರ್ಮಾಣ ಮಾಡುವುದು ಕಷ್ಟ ಸಾಧ್ಯ. ವಿಚಾರಕ್ರಾಂತಿಯ ಬಿತ್ತನೆಯು ಮೊದಲು ಕುಟುಂಬದಿಂದಲೇ ಆರಂಭವಾಗಬೇಕು. ಆಗ ಮಾತ್ರ ಅದರ ಸಂಪೂರ್ಣ ಯಶಸ್ಸು ಸಾಧ್ಯ ಎಂಬುದು ಲೇಖಕಿಯ ಧೋರಣೆಯಾಗಿದೆ.

ಸಂಪ್ರದಾಯ ಮಹಿಳೆಯ ನಡೆ, ನುಡಿ, ಆಚಾರಗಳ ಇತಿಮಿತಿಗಳಡಿಯಲ್ಲೇ ವೈಚಾರಿಕತೆಯ ಒರೆಗಲ್ಲಿಗೆ ತನ್ನ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವ ಚಿನ್ನಮ್ಮನಂತಹ ಪಾತ್ರಗಳು, ಸಮಾಜದಲ್ಲಿ ಉಂಟಾಗುತ್ತಿರುವ ಬದಲಾವಣೆಯ ಪ್ರಮಾಣದ ಬಗೆಗೆ ಅರಿವು ಮೂಡಿಸುತ್ತದೆ. "ಸ್ತ್ರೀ–ಸ್ತ್ರೀಗೆ ಸರಿಸಮಾನ'ವೆಂದು ಭಾವಿಸುವ ಚಿನ್ನಮ್ಮನ ಸ್ತ್ರೀತ್ವದ ಆದರ್ಶಗಳು ಸಮಾಜಕ್ಕೆ ಅನಿವಾರ್ಯವಾಗಿದೆ. ಇಂತಹ ಸಮಾನ ಮನಸ್ಕ ಸ್ತ್ರೀ ಸಂಬಂಧಗಳ ವೈಚಾರಿಕತೆಯನ್ನು ಮುಕ್ತಾರವರು ತಮ್ಮ ಕಾದಂಬರಿಯಲ್ಲಿ ಸಮಾನತೆಯ ಪರಿಕಲ್ಪನೆಯನ್ನಿಟ್ಟುಕೊಂಡು ನಿರೂಪಿಸಿದ್ದಾರೆ. ಪ್ರಸ್ತುತ ಸಂದರ್ಭಗಳಲ್ಲಿ ಹೆಣ್ಣಿನ ಮಾನಸಿಕ ಪ್ರಪಂಚವು ಸಂಕೀರ್ಣತೆ ಮತ್ತು ಜಟಿಲತೆಯಿಂದ ಕೂಡಿದ್ದು, ಆಕೆಯನ್ನು ಧರ್ಮ, ಸಂಪ್ರದಾಯದ ಆಚಾರ ವಿಚಾರಗಳು ದ್ವಂದ್ವಕ್ಕೆ ಸಿಲುಕಿಸಿವೆ. ಇಂತಹ ಸನ್ನಿವೇಶಗಳಲ್ಲಿ ಮಹಿಳೆ ಅಸಹಾಯಕಳಾಗಿ ಸಮಾಜದ ಕಟ್ಟುಪಾಡುಗಳನ್ನು ಸ್ವೀಕರಿಸುವುದು ಅನಿವಾರ್ಯವಾಗುತ್ತದೆ. ಆದರೆ ಇದರಿಂದ ಹೊರಬರಲು ಪ್ರಯತ್ನಿಸುವ, ಅದರಲ್ಲೂ ಸಂಪ್ರದಾಯ ಮನೆತನದ ಹಿರಿಯ ಹೆಣ್ಣುಮಕ್ಕಳಲ್ಲಿ ಕಂಡುಬರುವ ಇಂತಹ ಬದಲಾವಣೆ ಧಾರ್ಮಿಕ ಚೌಕಟ್ಟಿನ ಪರಿಧಿಯನ್ನು ಮೀರಿ, ಸಾಧಿಸುವ ಪಾತ್ರಗಳಾಗಿ ಕಂಡುಬಂದಿವೆ. ಪರಂಪರೆಯ ಜಾಢ್ಯದಿಂದ ಹೊರಬಂದು, ಮಡಿವಂತರ ಮಂಡಲದಿಂದ ದೂರನಿಂತು ವಾಸ್ತವವಾದಿ ನೆಲೆಯಲ್ಲಿ ಸಾಹಿತ್ಯವನ್ನು ಸೃಷ್ಟಿಸಿದ ಲೇಖಕಿಯ ಆಶಯ ಕಾದಂಬರಿಯಲ್ಲಿ ಯಶಸ್ವಿಯಾಗಿದೆ.

'ಜೀವ–ಜೀವದ ನಂಟು' ಕಾದಂಬರಿಯಲ್ಲಿ ವಿಧವಾವಿವಾಹದ ವಸ್ತುವನ್ನು ಆಯ್ದುಕೊಂಡು, ಸಂಪ್ರದಾಯ ಮನೆತನದ ಸುತ್ತ ಕಥೆ ಹೆಣೆಯಲಾಗಿದೆ. ಕಾಲ ಬದಲಾದಂತೆ ಹೊಸ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಹಿರಿಯ ಸಂಪ್ರದಾಯವಾದಿಗಳನ್ನು ಪ್ರಸ್ತುತದಲ್ಲಿ ಕಾಣಬಹುದಾಗಿದೆ. ಈ ಕಾದಂಬರಿಯಲ್ಲಿ ಕಂಡುಬರುವ ಎಲ್ಲಾ ಪಾತ್ರಗಳು ವಿಧವಾವಿವಾಹಕ್ಕೆ ಪ್ರೋತ್ಸಾಹಿಸುವ ವಿಚಾರವಂತಿಕೆಯ ಪಾತ್ರಗಳಾಗಿ ರಚನೆಗೊಂಡಿರುವುದು ಕಾದಂಬರಿಯ ವಿಶಿಷ್ಟತೆಯಾಗಿದೆ. 'ಹೆಣ್ಣು ವಿಧವೆಯಾದರೆ ಅವಳಿಗೆ ಜೀವನದಲ್ಲಿ ಯಾವುದೇ ಅವಕಾಶವಾಗಲಿ, ಆಸೆ ಆಕಾಂಕ್ಷೆಗಳಾಗಲಿ ಇರಬಾರದು' ಎಂದು ಯೋಚಿಸುವ

ಸಮಾಜದ ಎದುರು ಸರಳಾ ವಿಧವಾವಿವಾಹದ ವಿಚಾರ ಅವಧಾನಿಗಳಿಗೆ ಹಾಗೂ ಸಂಪ್ರದಾಯ ಸಮಾಜಕ್ಕೆ ಹೊಸದು. ವಿಧವೆ ಅದರಲ್ಲೂ ಒಂದು ಮಗುವಿರುವಾಗ ಪುನರ್ವಿವಾಹವಾಗುವುದು ತೀರಾ ಸುಲಭದ ಮಾತಲ್ಲ. ಆದರೆ ತನ್ನ ಅತ್ತಿಗೆಯನ್ನು ಹತ್ತಿರದಿಂದ ನೋಡಿದ್ದ ಸಂಜೀವ ವಿಧವಾ ಜೀವನದ ಬಗೆಗೆ ಹೇಳುವ ಮಾತುಗಳು ಅವಧಾನಿಯವರ ದೃಷ್ಟಿಕೋನವನ್ನು ಬದಲಾಯಿಸುತ್ತದೆ."ಗಂಡಸಿನಂತೆ ಹೆಂಗಸು ಓದಬಹುದು, ಕೆಲಸಕ್ಕೆ ಸೇರಬಹುದು, ಮನೆಯ ಜವಾಬ್ದಾರಿ ಹೊರಬಹುದು. ಆದರೆ ಗಂಡಸಿಗಿರುವ ಹಾಗೆ ಮರುಮದುವೆ ಹಕ್ಕು ಹೊಂದಬಾರದು. ಚಿಕ್ಕ ವಯಸ್ಸಿನಲ್ಲಿ ಗಂಡ ಹೋದರೂ ಜೀವನವಿಡೀ ಒಂಟಿಬಾಳು ನಡೆಸಬೇಕು, ಗಂಡಸಿಗೇ ಒಂದು ಕಾನೂನು, ಹೆಂಗಸಿಗೆ ಒಂದು ಕಾನೂನೇನಪ್ಪಾ? ವಿಧವೆಯಾದರೆ ಏನಂತೆ?"[7] ಮರುವಿವಾಹವಾಗಿ ಅತ್ತಿಗೆಯೂ ಒಂದು ಸುಂದರ ಜೀವನ ನಡೆಸಬೇಕು ಎನ್ನುವ ಒಂದೇ ದೃಷ್ಟಿಯಿಂದ ಸಂಜೀವ ತನ್ನ ತಂದೆಯನ್ನು ಒಪ್ಪಿಸಲು ಮುಂದಾಗುತ್ತಾನೆ.

ಸಂಜೀವನ ವಿಚಾರಗಳು ಕಾದಂಬರಿಯಲ್ಲಿ ಪ್ರಜ್ಞಾಪೂರ್ವಕವಾಗಿ ಹರಡಿಕೊಂಡಿದೆ. ಹಿಂದಿನ ಸ್ಥಗಿತ ಸಂಪ್ರದಾಯದಲ್ಲಿನ ವೈದಿಕಶಾಹಿಯ ಮನಸ್ಸುಗಳು ಹೆಣ್ಣಿನ ಮುಂಗಾಣ್ಕೆಯನ್ನಾಗಲೀ ಅಥವಾ ಮುಂದುವರಿಕೆಯನ್ನಾಗಲೀ ಅಷ್ಟು ಬೇಗ ಒಪ್ಪಿಕೊಳ್ಳುವುದಿಲ್ಲ. ಹೇಗಾದರೂ ಮಾಡಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ಸ್ತ್ರೀ ಮುಂದುವರಿಸಿಕೊಂಡು ಹೋಗಬೇಕು ಎಂಬ ವಿಚಾರ ಮಾತ್ರ ಅಲ್ಲಿ ಮಡುಗಟ್ಟಿರುತ್ತದೆ. ಆದರೆ ಕಾಲದ ಬದಲಾವಣೆಯೊಂದಿಗೆ ಸಾಮಾಜಿಕ ಬದಲಾವಣೆಗಳೂ ಜರುಗಬೇಕು ಎಂಬುದನ್ನು ಸಂಜೀವನ ಪಾತ್ರ ಮನವರಿಕೆಮಾಡಿಕೊಡುತ್ತದೆ. ಸಂಜೀವನ ತಿಳುವಳಿಕೆ ಮಾತಿನಿಂದ ಪ್ರೇರಿತರಾದ ಅವಧಾನಿಗಳು ಒಂದು ವೇಳೆ ತಮ್ಮ ಸೊಸೆ ಮರಣಿಸಿ, ಮಗ ಉಳಿದಿದ್ದರೆ ತಾವು ಮಗನಿಗೆ ಇನ್ನೊಂದು ಮದುವೆ ಮಾಡುತ್ತಿರಲಿಲ್ಲವೇ ಎಂಬ ಸಮಾನತೆಯ ದೃಷ್ಟಿಯಿಂದ ಯೋಚಿಸಿ ಮರುಮದುವೆಗೆ ಒಪ್ಪಿಗೆ ನೀಡುತ್ತಾರೆ. ಆದರೂ ಎಲ್ಲೋ ಒಂದು ಕಡೆ ಅವಧಾನಿಗಳು ಸೊಸೆಯ ಬಗೆಗೆ ತಳೆಯುವ ಭಾವನೆ, ಸಮಾಜದ ಜನರಿಗೆ ಹೆದರುವ ರೀತಿ, ನಿಯಮಗಳ ರೂಢಿಯಿಂದ ಹಿಂದೆ ಸರಿಯುವಲ್ಲಿ ಅವರು ಅನುಭವಿಸುವ ವೇದನೆ ಅವರಲ್ಲಿನ ಸಂಪ್ರದಾಯದ ಬಲವಾದ ಸೆಳೆತವನ್ನು ಬಿಂಬಿಸುತ್ತದೆ. "ಏನೇ ಆಗಲಿ ನಾವು ಈ ಮದುವೆಗೆ ಪ್ರೋತ್ಸಾಹಿಸಬಾರದು, ಸಂಪ್ರದಾಯಸ್ಥರಾದ ನಾವೇ ಇಂತಹ ಮದುವೆಗಳಿಗೆ ಪ್ರೋತ್ಸಾಹ ನೀಡಿದರೆ, ಜನ ನಮ್ಮನ್ನು ಗೌರವಿಸುತ್ತಾರೆಯೇ? ನಾಲ್ಕು ಜನರ ನಡುವೆ ತಲೆ ಎತ್ತಿಕೊಂಡು ಬಾಳುವುದು ಹೇಗೆ? ಅಂತಹ ಸಂದರ್ಭ ಬಂದರೆ ಮನಸ್ಸು ಕಲ್ಲು ಮಾಡಿಕೊಂಡು ಸರಳಾ ಮತ್ತು ಮಗುವಿನೊಡನೆ ಸಂಬಂಧ ಕಡಿದುಕೊಳ್ಳಬೇಕು. ಅಂತಹ ಮಗನೇ

ಇಲ್ಲವಾದ ಮೇಲೆ ಇಂತಹ ಸೊಸೆಯ ಸಂಬಂಧ ನಮಗ್ಯಾಕೆ?"[8] ಪುನರ್ವಿವಾಹದ ಅವಕಾಶಗಳಿದ್ದಾಗಲೂ ವೈರಾಗಿಣಿಯಂತೆ ಒಂಟಿ ಜೀವನ ನಡೆಸುವುದೊಂದೆ ವಿಧವೆಯರ ಸಮಸ್ಯೆಯನ್ನು ಸೂಕ್ಷ್ಮವಾಗಿ ಪರಿಹರಿಸಬಲ್ಲದು ಎಂಬ ವಿಚಾರವನ್ನು ಹೊಂದಿದ್ದ ಸರಳಾ ಮರುವಿವಾಹಕ್ಕೆ ಸುಲಭವಾಗಿ ಒಪ್ಪಿಗೆ ನೀಡುವುದಿಲ್ಲ. ಹೆಣ್ಣಿನ ಬಾಳಿನಲ್ಲಿ ಮದುವೆ ಎಂಬುದು ಒಂದು ಸಲ ಮಾತ್ರ ಘಟಿಸುವಂತದ್ದು ಎಂದು ನಂಬಿರುವುದೇ ಆಕೆಯ ಇಂತಹ ವಿಚಾರಗಳ ಇತಿಮಿತಿಯಾಗಿದೆ. ಸಂಪ್ರದಾಯವನ್ನು ಕುರಿತು ವಿಧವೆಗೆ ಬಾಳು ನೀಡುವ ಸಂತೋಷ್‌ನಂತಹ ಮಾದರಿ ಪಾತ್ರವನ್ನು ರಚಿಸುವ ಮೂಲಕ ಲೇಖಕಿ ವಿಧವಾ ಸಮಸ್ಯೆಗೆ ವಿಧವಾ ವಿವಾಹದ ಪರಿಹಾರ ಸೂಚಿಸಿದ್ದಾರೆ.

ಲೇಖಕಿ ತಮ್ಮ ಕಾದಂಬರಿಯಲ್ಲಿ ಸ್ತ್ರೀಯರ ವಿಧವಾ ಸಮಸ್ಯೆಯನ್ನು ಯಥಾ ಸ್ಥಿತಿಯಲ್ಲಿಡಲು ಪ್ರಯತ್ನಿಸಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. ಇದು ಆಧುನಿಕತೆಯ ಅನುಸರನೆಯ ಹಿಂಜರಿಕೆಯಂತೆ ಕಂಡರೂ, ಸಾಂಪ್ರದಾಯಿಕ ಜೀವನದೊಂದಿಗೆ ಮಾಡಿಕೊಂಡ ಸಂಧಾನವಾಗಿದೆ. ಮಹಿಳೆಯರು ಎದುರಿಸುತ್ತಿದ್ದ ಹಲವಾರು ಬಗೆಯ ಸಮಸ್ಯೆಗಳಿಗೆ ಶಿಕ್ಷಣವು ಸಮರ್ಥ ಉತ್ತರವಾಗಬಹುದೆಂಬುದು ಲೇಖಕಿಯವರ ನಿರೀಕ್ಷೆಯಾಗಿತ್ತು. ಕಾದಂಬರಿಯಲ್ಲಿನ ಸರಳಾ ಸ್ತ್ರೀ ಶಿಕ್ಷಣ ಪಡೆದ ಮಹಿಳೆಯರ ಪ್ರತೀಕವಾಗಿ ಬಿಂಬಿತಳಾಗಿದ್ದಾಳೆ. ಆಧುನಿಕ ಮನೋಭಾವ ಹೊಂದಿದ್ದ ಈಕೆ, ಸಾಂಪ್ರದಾಯಿಕ ಜೀವನ ಮೌಲ್ಯಗಳೊಂದಿಗೆ ತಾಕಲಾಟ ನಡೆಸದೆ ಮರುಮದುವೆಯನ್ನು ಒಪ್ಪಿಕೊಳ್ಳುತ್ತಾಳೆ. ಸಾಂಪ್ರದಾಯಿಕ ಜೀವನ ಮೌಲ್ಯಗಳಿಂದ ಹೊರಬಂದು ಆಧುನಿಕ ಜೀವನ ಮೌಲ್ಯಗಳೊಂದಿಗೆ ರಾಜಿ ಸಂಧಾನ ಮಾಡಿಕೊಳ್ಳುವ ಕಾದಂಬರಿಯ ಪಾತ್ರಗಳು ಪ್ರಗತಿಪರ ಧೋರಣೆಯನ್ನು ವ್ಯಕ್ತಪಡಿಸುತ್ತವೆ.

ವಿಧವಾ ಸಮಸ್ಯೆ ಆರಂಭಕಾಲದ ಕಾದಂಬರಿಗಳಲ್ಲಿ ಮುಖ್ಯ ಸಮಸ್ಯೆಯಾಗಿ ಪರಿಗಣಿತವಾಗಿದ್ದು, ಈ ಸಮಸ್ಯೆಗೆ ಪರಿಹಾರವಾಗಿ ವಿಧವಾವಿವಾಹವನ್ನು ಅಂದಿನ ಬರಹಗಾರರು ಸೂಚಿಸಿದ್ದಾರೆ. ಆದರೆ ಅನಂತರದ ಕಾಲದವರಾದ ಮುಕ್ತಾರವರು ಸ್ವತಃ ಹೆಣ್ಣಾಗಿ, ಸಂಪ್ರದಾಯ ಕುಟುಂಬದ ಮಹಿಳೆಯಾಗಿ ಅದನ್ನು ಸಮರ್ಥಿಸಿರುವುದು ಗಮನಾರ್ಹ ವಿಷಯ. ಸುತ್ತಲಿನ ಸಾಂಪ್ರದಾಯಿಕ ಪರಿಸರಕ್ಕಿಂತ ಭಿನ್ನವಾದ ವಿಧವಾವಿವಾಹದಂತಹ ವಿಚಾರಗಳನ್ನು ಪ್ರಕಟಿಸುವತ್ತ ಲೇಖಕಿ ಗಮನಸಳೆದಿದ್ದಾರೆ. ವಿಧವೆಯರಿಗೆ ಮರುವಿವಾಹವೊಂದೇ ಏಕೈಕ ಮಾರ್ಗವಲ್ಲ, ಇನ್ನಿತರ ಸುಧಾರಣಾಪರ ಚಟುವಟಿಕೆಗಳಿಂದ ಅವರನ್ನು ಬೆಳಕಿಗೆ ತರಬಹುದು ಎಂಬ ಆಶಾಭಾವನೆಯನ್ನು ಇವರ ಕಾದಂಬರಿಗಳು ಭಿತ್ತರಿಸುತ್ತವೆ. ಸ್ತ್ರೀ ಶಿಕ್ಷಣ ಮತ್ತು ಮಹಿಳೋದ್ಧಾರದ ಕಾರ್ಯಗಳನ್ನು ಪ್ರೋತ್ಸಾಹಿಸುವ ಕೃತಿಗಳು ಸ್ತ್ರೀಯರ

ಸಮಸ್ಯೆಯನ್ನು ಬಗೆಹರಿಸುವಲ್ಲಿ ಸ್ವಲ್ಪ ಮಟ್ಟಿಗಾದರೂ ಕಾರ್ಯತತ್ಪರವಾಗಿವೆ. ಹಿಂದೂ ಸಮಾಜದ ಪುರುಷಪರ ಜೀವನ ಮೌಲ್ಯಗಳ ಅನ್ಯಾಯವನ್ನು ಎತ್ತಿ ಹಿಡಿದು ಸ್ತ್ರೀಪರ ಹಕ್ಕನ್ನು ಪ್ರತಿಪಾದಿಸಿರುವುದು ಸ್ತ್ರೀ ಸಮುದಾಯದ ವಿಜಯವೂ, ಪುರುಷ ಸಮಾಜದ ದುರಂತವೂ ಆಗಿದೆ.

ಹಲವಾರು ಸಮಾಜ ಸುಧಾರಕರ ಸಾಮಾಜಿಕ ಕಳಕಳಿ, ಸಂಘ–ಸಂಸ್ಥೆಗಳ ಜಾಗೃತ ಹೋರಾಟ, ಆಧುನಿಕ ಶಿಕ್ಷಣದ ಫಲ, ಜನರ ವೈಚಾರಿಕ ಚಿಂತನೆ ಮತ್ತು 1956ರ ಹಿಂದೂ ಮರುವಿವಾಹ ಕಾಯ್ದೆಯಂತಹ ಪ್ರೋತ್ಸಾಹದಾಯಕ ಕಾನೂನುಗಳಿಂದಾಗಿ ವಿಧವಾ ಸಮಸ್ಯೆ ಬಹುಮಟ್ಟಿಗೆ ನಿವಾರಿಸಿದೆ. ಆದರೂ ಕಟ್ಟಾಸಂಪ್ರದಾಯವಾದಿ ಕುಟುಂಬಗಳು ಈ ಕೆಟ್ಟಪದ್ದತಿಯನ್ನು ಬಿಟ್ಟುಕೊಡದೆ ಶೋಷಿಸುತ್ತಿರುವುದು ಆಧುನಿಕ ನಾಗರಿಕ ಸಮಾಜವು ತಲೆತಗ್ಗಿಸುವ ವಿಷಯವಾಗಿದೆ. ವಿಧವೆಯರನ್ನು ಕುರಿತು ಸಮಾಜವು ತಳೆದ ಕಟುಧೋರಣೆಗೆ ಲೇಖಕಿಯ ಕಾದಂಬರಿಗಳು ಸಾಕಷ್ಟು ನಿದರ್ಶನಗಳನ್ನು ಒದಗಿಸುತ್ತವೆ.

ಲೇಖಕಿಯು ಸೃಷ್ಟಿಸಿದ ಪಾತ್ರಗಳು ವಿಧವಾಸಮಸ್ಯೆಯ ಕರಾಳ ಕೈಗೆ ಸಿಕ್ಕಿ ಎಲ್ಲಿಯೂ ನರಳುವುದಿಲ್ಲ. ಬದಲಾಗಿ ಸಂಪ್ರದಾಯದ ಕಪಿಮುಷ್ಟಿಯಿಂದ ಹೊರಬಂದು ಆದರ್ಶ ಮತ್ತು ಆತ್ಮವಿಶ್ವಾಸದಿಂದ ಬಾಳುವ ಸ್ತ್ರೀ ಪಾತ್ರಗಳ ಚಿತ್ರಣವನ್ನು ಕಾಣಬಹುದಾಗಿದೆ. ಸಾಂಪ್ರದಾಯಿಕತೆ ಮತ್ತು ಪ್ರಗತಿಪರ ಚಿಂತನೆಯನ್ನು ಸಮತೋಲನದಲ್ಲಿರಿಸಿಕೊಂಡು ತಮ್ಮ ಸಾಹಿತ್ಯ ಕೃತಿಗಳನ್ನು ರಚಿಸಿದ ಲೇಖಕಿ ಎಲ್ಲಿಯೂ ಪೂರ್ವಗ್ರಹಪೀಡಿತಗೊಳ್ಳದೆ, ಜೊತೆಗೆ ಎಲ್ಲಿಯೂ ಅಂಧಾನುಕರುಣೆಗೆ ಒಳಗಾಗದಿರುವುದು ಅವರ ಸ್ಥಿತ ಪ್ರಜ್ಞೆಯನ್ನು ಪರಿಚಯಿಸುತ್ತದೆ. ಮಹಿಳೆಯ ಜೀವನ ಬಾಲ್ಯದಿಂದಲೂ ಅವಿವಾಹಿತ, ವಿವಾಹಿತ ಹಾಗೂ ವೈಧವ್ಯದ ನೆಲೆಯಲ್ಲಿ ಸಿಲುಕಿ ಅಸಹಾಯಕತೆಯಿಂದ ನರಳುವ ವಿವಿಧ ಸನ್ನಿವೇಶಗಳಿಗೆ ಮುಕ್ತಾರವರು ಪ್ರಾಮಾಣಿಕವಾಗಿ ಸ್ಪಂದಿಸುವ ಮೂಲಕ ಸಮಸ್ಯೆಯ ಮೂಲವನ್ನು ಶೋಧಿಸಿ, ಸಮಸ್ಯೆಗೆ ಪರಿಹಾರ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

## ಕೊನೆ ಟಿಪ್ಪಣಿಗಳು:

1. ಮುಕ್ತಾ ಸಿ. ಎನ್., ಕಳೆದುಹೋದವರು. ಪು.ಸಂ. 1
2. ಮುಕ್ತಾ ಸಿ. ಎನ್., ಮಾತುಕೊಟ್ಟವಳು. ಪು.ಸಂ. 8
3. ಮುಕ್ತಾ ಸಿ. ಎನ್., ಮಾತುಕೊಟ್ಟವಳು. ಪು.ಸಂ. 15
4. ಮುಕ್ತಾ ಸಿ. ಎನ್., ಮಾತುಕೊಟ್ಟವಳು. ಪು.ಸಂ. 51
5. ಪೂರ್ವಾಚಾರ್ ಎಮ್., ಭಾರತೀಯ ಸಮಾಜ ಮತ್ತು ಸಂಸ್ಕೃತಿ. ಪು.ಸಂ. 219
6. ಮುಕ್ತಾ ಸಿ. ಎನ್., ಪ್ರೇಮಸಂಗಮ. ಪು.ಸಂ. 117
7. ಮುಕ್ತಾ ಸಿ. ಎನ್., ಜೀವ ಜೀವದ ನಂಟು. ಪು.ಸಂ. 149
8. ಮುಕ್ತಾ ಸಿ. ಎನ್., ಜೀವ ಜೀವದ ನಂಟು. ಪು.ಸಂ. 151

## ಪರಮಾರ್ಶನ ಗ್ರಂಥಗಳು:


1. ಮುಕ್ತಾ ಸಿ. ಎನ್. (1989). ಕಳೆದುಹೋದವರು. ಪಾಂಚಜನ್ಯ ಪಬ್ಲಿಕೇಷನ್ಸ್. ಬೆಂಗಳೂರು.
2. ಮುಕ್ತಾ ಸಿ. ಎನ್. (1996). ಜೀವ ಜೀವದ ನಂಟು. ರಾಜಲಕ್ಷ್ಮಿ ಪ್ರಕಾಶನ. ಬೆಂಗಳೂರು.
3. ಮುಕ್ತಾ ಸಿ. ಎನ್. (1990). ಮಾತುಕೊಟ್ಟವಳು. ಪಾಂಚಜನ್ಯ ಪಬ್ಲಿಕೇಷನ್ಸ್. ಬೆಂಗಳೂರು.
4. ಮುಕ್ತಾ ಸಿ. ಎನ್. (2001). ಪ್ರೇಮಸಂಗಮ. ಗೀತಾಂಜಲಿ ಪಬ್ಲಿಕೇಷನ್ಸ್. ಬೆಂಗಳೂರು.